Reg. No. : ....................................

Name : ..........................................

# FIRST YEAR HIGHER SECONDARY EQUIVALENCY EXAMINATION, MAY 2024

## Part – II

## KANNADA

**Maximum : 80 Scores**

Time : 2½ Hours

Cool-off Time : 15 Minutes

**FY 704**

---

**ವಿದ್ಯಾರ್ಥಿಗಳಿಗೆ ಸೂಚನೆಗಳು :**

- ಮೊದಲ 15 ನಿಮಿಷ ಕೂಲ್ ಆಫ್ ಸಮಯವಾಗಿದೆ. ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳುವುದಕ್ಕೂ ಉತ್ತರಗಳ ಬಗ್ಗೆ ಯೋಚಿಸುವುದಕ್ಕೂ ಈ ಸಮಯವನ್ನು ಬಳಸಿಕೊಳ್ಳಬಹುದು.
- ಪ್ರಶ್ನೆಗಳನ್ನು ಮತ್ತು ಸೂಚನೆಗಳನ್ನು ಸರಿಯಾಗಿ ಓದಿ ಅರ್ಥೈಸಿಕೊಂಡ ಮೇಲೆ ಉತ್ತರ ಬರೆಯಿರಿ.
- ಉತ್ತರ ಬರೆಯುವಾಗ ಅಂಕ, ಸಮಯ ಮೊದಲಾದವುಗಳನ್ನು ಪರಿಗಣಿಸಬೇಕು.
- ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ.

**Score**

**1 ರಿಂದ 4ರ ವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ.** **(4×1=4)**

**1.** ‘ಕರುಣಾಳು ಬಾ ಬೆಳಕೆ’ ಪದ್ಯವನ್ನು ಬರೆದವರು ಯಾರು ?
(ಕಯ್ಯಾರ ಕಿಞ್ಞಣ್ಣ ರೈ, ಕುವೆಂಪು, ಬೆಟಗೇರಿ ಕೃಷ್ಣ ಶರ್ಮ, ಬಿ.ಎಂ.ಶ್ರೀ.)

**2.** ‘‘ಕೋಪಿ ಕನಿಕರ ತೋರಬಲ್ಲುದೆ ? ನಿನಗೆ ಬರಿ ಹುಚ್ಚು’’ ಎಂಬ ಸಾಲುಗಳಿರುವ ಕವನ ಯಾವುದು ?
(ಮರಸು ಬೇಟೆ, ಪ್ರಕೃತಿ, ಕಗ್ಗ, ನಿದ್ರಾಭರದೊಳಿರ್ದರ ಕೊಲುವುದುಚಿತವೇ)

**3.** ಬಸವಣ್ಣನವರ ವಚನಗಳ ಅಂಕಿತವೇನು ?
(ಚೆನ್ನಮಲ್ಲಿಕಾರ್ಜುನ ದೇವ, ಆನಂದ ಕಂದ, ರಾಮನಾಥ, ಕೂಡಲಸಂಗಮದೇವ)

**4.** ‘ನೀಲಿಯಿಂದ ನೆಲಕ್ಕೆ’ – ಇದು ಸಾಹಿತ್ಯದ ಯಾವ ಪ್ರಕಾರಕ್ಕೆ ಸೇರುತ್ತದೆ ?
(ಕಥೆ, ಪ್ರಬಂಧ, ಪ್ರವಾಸ ಕಥನ, ವಿಮರ್ಶೆ)

Score

**5 ರಿಂದ 9ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ.** **(4×1=4)**

**5.** ಓಡುತ್ತೋಡುತ್ತ – ಈ ಪದವನ್ನು ವಿಂಗಡಿಸಿ ಬರೆಯಿರಿ.

**6.** ಹರಣ – ಈ ಪದದ ಸಂಸ್ಕೃತ ರೂಪವನ್ನು ಹೆಸರಿಸಿರಿ.

**7.** ಹಗಲು – ಈ ಪದದ ವಿರೋಧಾರ್ಥ ಪದವನ್ನು ಬರೆಯಿರಿ.

**8.** ಪಾರಿತೋಷಕ – ಈ ಪದದ ಅರ್ಥವನ್ನು ಬರೆಯಿರಿ.

**9.** ಕರ್ಣನು ತನ್ನ ದೇಹಕವಚವನ್ನು ಕತ್ತರಿಸಿ ಯಾರಿಗೆ ಕೊಟ್ಟನು ?

**10 ರಿಂದ 15ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ.** **(5×2=10)**

**10.** ಪೃಥ್ವಿ – ಇದರ ಎರಡು ಪರ್ಯಾಯ ಪದಗಳನ್ನು ಬರೆಯಿರಿ.

**11.** 'ಕರಿಗಳನು ಮುರಿದಿಡುವ ಸಿಂಹಕೆ ನರಿಗಳಿದಿರೆ' – ಈ ಮಾತನ್ನು ಯಾರು ಯಾರಿಗೆ ಹೇಳಿದರು ?

**12.** ಕೆಳಗೆ ನೀಡಲಾದ ಮಿಶ್ರವಾಕ್ಯವನ್ನು ಎರಡು ಸರಳ ವಾಕ್ಯಗಳಾಗಿ ವಿಂಗಡಿಸಿ ಬರೆಯಿರಿ.

ಛತ್ರಪತಿ ಶಿವಾಜಿಯು ಕರ್ನಾಟಕಕ್ಕೆ ದಂಡಯಾತ್ರೆ ಬೆಳೆಸಿ ಬೆಳ್ವಾಡಿ ಕೋಟೆಗೆ ಮುತ್ತಿಗೆ ಹಾಕಿದನು.

**13.** ಪ್ರವಾಸಿ ತಾಣಗಳಲ್ಲಿ ಶುಚಿತ್ವಕ್ಕೆ ಮಹತ್ವವನ್ನು ಕೊಡುವ ಒಂದು ಘೋಷಣಾ ವಾಕ್ಯವನ್ನು ತಯಾರಿಸಿರಿ.

**14.** ವಸ್ತ್ರ ಮಳಿಗೆಯಲ್ಲಿನ ಬೆಳಕಿಗೆ ಬಟ್ಟೆಯ ನಿಜವಾದ ಬಣ್ಣ ಗೋಚರಿಸದೆ ನಾವು ಮೋಸಹೋಗುತ್ತೇವೆ. – ಅಡಿಗೆರೆ ಎಳೆದ ಪದವನ್ನು ಬಳಸಿಕೊಂಡು ಬೇರೊಂದು ವಾಕ್ಯವನ್ನು ರಚಿಸಿರಿ.

**15.** ಬಸವಣ್ಣನವರ ಅಭಿಮತದಂತೆ ದೇವಲೋಕ ಮತ್ತು ಮರ್ತ್ಯಲೋಕ ಯಾವುದು ?

**16 ರಿಂದ 20ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿರಿ.** **(4×3=12)**

**16.** ಕೆಳಗೆ ನೀಡಲಾದ ವಾಕ್ಯದಲ್ಲಿನ ಅಕ್ಷರ ತಪ್ಪುಗಳನ್ನು ಸರಿಪಡಿಸಿ ಬರೆಯಿರಿ.

ಬೆಳ್ವಾಡಿ ಕೋಟೆಯು ಬಹು ವಿಸಾಲವಾದ ಕೋಟೆಯಾಗಿದೆ. ಇದರ ಸುತ್ತಲೂ ಎತರವಾದ ಗೊಡೆಗಳು ಇದುವು. ಇದರ ಸುತ್ತಲೂ ಆಲವಾದ ಕಂದಕವನ್ನು ಕಣಬಹುದು.

Score

**17.** ಸರಿಹೊಂದಿಸಿ ಬರೆಯಿರಿ.

| ಅ | ಆ |
|---|---|
| ನಾ. ಕಸ್ತೂರಿ | ವೀಣಕ್ಕಾ ಅವಸರವೇನಿತ್ತು |
| ಡಾ. ಪಿ. ಶ್ರೀಕೃಷ್ಣ ಭಟ್ | ನನ್ನ ಬೆನ್ನು |
| ಎ. ಆರ್. ಮಣಿಕಾಂತ್ | ಕಳ್ಳಿಗೆ ಮಹಾಬಲ ಭಂಡಾರಿ |

**18.** ಕೆಳಗೆ ನೀಡಲಾದ ವಚನದ ಆಶಯವನ್ನು ಬರೆಯಿರಿ.

ಕಳಬೇಡ ಕೊಲಬೇಡ

ಹುಸಿಯ ನುಡಿಯಲು ಬೇಡ

ಮುನಿಯಬೇಡ

ಅನ್ಯರಿಗೆ ಅಸಹ್ಯ ಪಡಬೇಡ

ತನ್ನ ಬಣ್ಣಿಸಬೇಡ

ಇದಿರ ಹಳಿಯಲು ಬೇಡ

ಇದೇ ಅಂತರಂಗ ಶುದ್ಧಿ

ಇದೇ ಬಹಿರಂಗ ಶುದ್ಧಿ

ಇದೇ ನಮ್ಮ ಕೂಡಲ ಸಂಗನನೊಲಿಸುವ ಪರಿ

**19.** ಕಾಡಿಗೆ ತಾನೂ ಬರುತ್ತೇನೆಂದು ಹಠ ಹಿಡಿದ ಪುಟ್ಟ ಕಂದನಿಗೆ ತಂದೆಯು ನೀಡಿದ ಉಪದೇಶವೇನು ? ವಿಶದಪಡಿಸಿರಿ.

**20.** 'ಬೆಳೆಯ ಸಿರಿ ಮೊಳಕೆಯಲ್ಲಿ' – ಈ ಗಾದೆ ಮಾತಿನ ಅರ್ಥವನ್ನು ವಿಸ್ತರಿಸಿ ಬರೆಯಿರಿ.

**21 ರಿಂದ 25 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿರಿ.** **(4×4=16)**

**21.** 'ಇಂಗ್ಲಿಷ್ ಮಾಧ್ಯಮ' ಶಾಲೆಯ ಕುರಿತು ಡಾ. ಪಾರ್ವತಿ ಐತಾಳ್ ಅವರ ಅಭಿಪ್ರಾಯವನ್ನು ಸಂಗ್ರಹಿಸಿ ಬರೆಯಿರಿ.

**22.** ಹಿಮಾಲಯದ ಹಿಮರಾಶಿಗಳ ಕರಗುವಿಕೆಯಿಂದ ನದಿಗಳಲ್ಲುಂಟಾಗುವ ಅಪಾಯವೇನು ? ವಿಶದಪಡಿಸಿರಿ.

**Score**

**23.** ಕೆಳಗೆ ನೀಡಿರುವ ಕಗ್ಗದಲ್ಲಿ ಅಡಕವಾಗಿರುವ ಜೀವನಮೌಲ್ಯವನ್ನು ಕುರಿತು ಬರಹವೊಂದನ್ನು ಸಿದ್ಧಪಡಿಸಿರಿ.

ಮಿತವಿರಲಿ ನಿನ್ನೆಲ್ಲ ಜಗದ ವರ್ತನೆಗಳಲಿ
ಅತಿರೇಕದಿಂದೊಳಿತೆ ವಿಷಮವಾದೀತು
ಸತತ ನರಯತ್ನಂ ಮಿತಮಿರ್ದೊಡಂ ವ್ಯಾಪ್ತಿ ನಿ
ಶ್ಚಿತವಯ್ಯ ಜಯಸಿದ್ಧಿ – ಮರುಳ ಮುನಿಯ

**24.** ಕೆಳಗೆ ನೀಡಲಾದ ಕಳ್ಳಿಗೆ ಮಹಾಬಲ ಭಂಡಾರಿಗಳ ಜೀವನ ಚರಿತ್ರೆಯ ಭಾಗವನ್ನು ಆತ್ಮಕಥೆಯಾಗಿ ಪರಿವರ್ತಿಸಿ ಬರೆಯಿರಿ.

ಕಾಸರಗೋಡು ತಾಲೂಕು ಮೀಂಜ ಗ್ರಾಮದ ಕಳ್ಳಿಗೆ ಕುಟುಂಬದಲ್ಲಿ 1928 ರಲ್ಲಿ ಮಹಾಬಲ ಭಂಡಾರಿಗಳು ಹುಟ್ಟಿದರು. ಅವರ ತಂದೆ ತಲೇಕಳ ಮನೆತನದ ಸಂಕಪ್ಪ ಭಂಡಾರಿಗಳು. ಅವರ ತಾಯಿ ಕಳ್ಳಿಗೆ ಬೀಡಿನ ಶ್ರೀಮತಿ ಶಂಕರಿ. ಅವರಿಗೆ ಏಳು ಜನ ಸೋದರ ಮಾವಂದಿರು ಇದ್ದರು.

**25.** ಯಕ್ಷಗಾನದ ಇಂದಿನ ಸ್ಥಿತಿಗತಿಯನ್ನು ಕುರಿತು ಕಿರು ಟಿಪ್ಪಣಿಯೊಂದನ್ನು ಬರೆಯಿರಿ.

**26 ರಿಂದ 29 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಒಂದು ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ. (3×6=18)**

**26.** ಮಳೆಗಾಲದ ಸಾಂಕ್ರಾಮಿಕ ರೋಗಗಳ ಕುರಿತು ಜನಜಾಗೃತಿ ಮೂಡಿಸುವ ಕರಪತ್ರವೊಂದನ್ನು ತಯಾರಿಸಿರಿ.

**27.** 'ನಿದ್ರಾಭರದೊಳಿರ್ದರ ಕೊಲುವುದುಚಿತವೆ' ಪಾಠಭಾಗದಲ್ಲಿ ನಳನಿಗೆ ಹಂಸವು ನೀಡಿದ ಉಪದೇಶದ ಮಾತುಗಳನ್ನು ಸಂಗ್ರಹಿಸಿ ಬರೆಯಿರಿ.

**28.** 'ಮರಸು ಬೇಟೆ' ಕಥನ ಕವನದ ಕಥಾಸಾರವನ್ನು ಬರೆಯಿರಿ.

**29.** ಜಿ. ಎಸ್. ಶಿವರುದ್ರಪ್ಪನವರ ಮುಂಬೈ – ಪ್ಯಾರಿಸ್ ಪ್ರಯಾಣದ ವಿಶೇಷತೆಯನ್ನು ಬರೆಯಿರಿ.

**30 ರಿಂದ 32 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಒಂದೂವರೆ ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ. (2×8=16)**

**30.** 'ನಯನದೊಳಂ ಎರ್ದೆಯೊಳಂ ನಿನ್ನಯ ರೂಪಿರ್ದಪುದು' ಕಾವ್ಯಭಾಗದಲ್ಲಿ ಬರುವ ಕರ್ಣನ ತ್ಯಾಗ ಮನೋಭಾವ ಹಾಗೂ ಸ್ವಾಮಿನಿಷ್ಠೆಯ ಕುರಿತು ಪ್ರಬಂಧವೊಂದನ್ನು ಬರೆಯಿರಿ.

**31.** ತನ್ನ ಶತ್ರುಗಳೊಂದಿಗೆ ಹೋರಾಡಿದ ವೀರೆ ಬೆಳ್ವಾಡಿಯ ಮಲ್ಲಮ್ಮಳ ಪಾತ್ರ ಚಿತ್ರಣ ಮಾಡಿರಿ.

**32.** 'ಕರ್ತವ್ಯ ನಿಷ್ಠೆ ಹಾಗೂ ಪ್ರಾಮಾಣಿಕ ಸೇವೆಯಿಂದ ಜೀವನದಲ್ಲಿ ಗೆಲುವು ಸಾಧ್ಯ' ಎಂಬುದನ್ನು 'ಕಳ್ಳರ ಗುರು' ಪಾಠದ ಆಧಾರದಲ್ಲಿ ಸಮರ್ಥಿಸಿ ಬರೆಯಿರಿ.

---